# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (398)346 |
| ಸದಸ್ಯರ ಹೆಸರು | ಶ್ರೀಆರ್. ಪ್ರಸನ್ನಕುಮಾರ್ ( ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ವಿಷಯ | ಮಾಶಾಸನ ವಿಳಂಬದ ಬಗ್ಗೆ |
| ಉತ್ತರಿಸಬೇಕಾದ ದಿನಾಂಕ | 23.09.2020 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |
| **ಪ್ರಶ್ನೆ** | **ಉತ್ತರ** |
| ಅ) ರಾಜ್ಯದಲ್ಲಿ ಅಂಗವಿಕಲರಿಗೆ, ಹಿರಿಯ ನಾಗರೀಕರಿಗೆ. ವಿಧವೆಯರಿಗೆ ಮಾಸಾಶನವನ್ನು ಕಳೆದ 8 ತಿಂಗಳಿಂದ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿವಿಧ ಸಾಮಾಜಿಕ ಯೋಜನೆಗಳಡಿ ಮಾಸಿಕ ಪಿಂಚಣಿ ನಿರ್ವಹಣಾ ಪ್ರಕ್ರಿಯೆಯನ್ನು ಜನವರಿ 2020 ರಿಂದ ಪೂರ್ಣವಾಗಿ ಖಜಾನೆ-2 ವ್ಯವಸ್ಥೆಯಡಿ ತರಲಾಗಿದ್ದು, ಎಲ್ಲಾ ಜಿಲ್ಲಾ ಖಜಾನೆಯಲ್ಲಿ ಆಗಸ್ಟ್ 2020 ರ ಮಾಹೆಯವರೆಗೂ ಬಿಲ್ಲಿಂಗ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿರುತ್ತದೆ. ಮುಂದುವರೆದು, ಈ ಹಿಂದಿನ ಖಜಾನೆ-1 ವ್ಯವಸ್ಥೆಯಡಿ ಅಸಮರ್ಪಕ ವಿಳಾಸ, ಪಿನ್ ಕೋಡ್, ಬ್ಯಾಂಕ್‌ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್ ಇತ್ಯಾದಿ ಮಾಹಿತಿಯುಳ್ಳ ದಾಖಲೆಗಳನ್ನು ಖಜಾನೆ-2ಗೆ ವರ್ಗಾಯಿಸಲು ಸಾಧ್ಯವಾಗದಿರುವ ಕಾರಣ ಪಿಂಚಣಿ ವಿತರಣೆಯು ಸಾಧ್ಯವಾಗಿರುವುದಿಲ್ಲ. ಸದರಿ ಪ್ರಕರಣಗಳನ್ನು ಕಡ್ಡಾಯ ಭೌತಿಕ ಪರಿಶೀಲನೆಗೆ ಒಳಪಡಿಸಿ, ನಿಖರ ಮಾಹಿತಿಯನ್ನು ಸಂಗ್ರಹಿಸಿ ಕ್ರಮವಹಿಸಲಾಗುತ್ತಿದೆ.<br>ಮಂಜೂರಾತಿ ಪ್ರಾಧಿಕಾರಿಗಳಾದ ತಹಶೀಲ್ದಾರರು ಫಲಾನುಭವಿಗಳ ಮಾಹಿತಿಯಲ್ಲಿನ ನ್ಯೂನ್ಯತೆಯನ್ನು ಸರಿಪಡಿಸಿ ಕ್ರಮವಹಿಸಿದ ಪ್ರಕರಣಗಳನ್ನು ಅನುಕಲನೆ ಮೂಲಕ ಖಜಾನೆ-2 ತಂತ್ರಾಂಶಕ್ಕೆ ವರ್ಗಾಯಿಸಿ, ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. ಅಲ್ಲದೇ, ಭೌತಿಕ ಪರಿಶೀಲನೆ ನಡೆಸಿ ಸಮರ್ಪಕ ವಿಳಾಸ, ಪಿನ್ ಕೋಡ್ ಸಂಗ್ರಹಿಸಿ ಮರುಚಾಲನೆಗಳಿಸಲಾದ ಫಲಾನುಭವಿಗಳಿಗೆ 3 ತಿಂಗಳ ಹಿಂಬಾಕಿಯೊಂದಿಗೆ ಪಿಂಚಣಿ ಪಾವತಿಸಲಾಗುತ್ತಿದೆ ಹಾಗೂ ಪ್ರತಿ ವಾರ ಈ ಪ್ರಕರಣಗಳ ಮಾಹಿತಿ ಪಡೆದು ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. |
| ಆ) ರಾಜ್ಯದಲ್ಲಿ ಮಾಸಾಶನ ಪಡೆಯುತ್ತಿರುವ ಹಿರಿಯ ನಾಗರೀಕರು.ಅಂಗವಿಕಲರು ವಿಧವೆಯರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು) | ಅನುಬಂಧದಲ್ಲಿ ಲಗತ್ತಿಸಲಾಗಿದೆ. |

**NO. DSSP-LAQ/10/2020**

(ಆರ್.ಅಶೋಕ್)
ಕಂದಾಯ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೯೬ ಕ್ಕೆ ಉತ್ತರ

| SL NO | District | OAP | DWP | PHP |
|---|---|---|---|---|
| 1 | Bagalkot | 19355 | 63934 | 36844 |
| 2 | Ballari | 66728 | 84833 | 41310 |
| 3 | Bangalore Rura | 34918 | 31538 | 12937 |
| 4 | Belagavi | 75860 | 129951 | 86119 |
| 5 | Bengaluru | 57054 | 103150 | 37578 |
| 6 | Bidar | 37456 | 45172 | 35650 |
| 7 | Chamarajanaga | 87283 | 44025 | 21202 |
| 8 | Chikballapur | 25390 | 38991 | 22849 |
| 9 | Chikkamagalur | 24987 | 36495 | 15779 |
| 10 | Chitradurga | 22848 | 51044 | 35505 |
| 11 | Dakshina Kann | 14350 | 48026 | 18071 |
| 12 | Davanagere | 45588 | 56924 | 27221 |
| 13 | Dharwad | 42769 | 56027 | 33706 |
| 14 | Gadag | 35709 | 36906 | 24026 |
| 15 | Hassan | 103866 | 68792 | 25058 |
| 16 | Haveri | 11591 | 59258 | 38101 |
| 17 | Kalaburagi | 38095 | 51765 | 36992 |
| 18 | Kodagu | 7319 | 15045 | 5153 |
| 19 | Kolar | 46926 | 47844 | 23528 |
| 20 | Koppal | 22841 | 43619 | 28635 |
| 21 | Mandya | 99681 | 92248 | 34803 |
| 22 | Mysuru | 46106 | 102874 | 37358 |
| 23 | Raichur | 50480 | 57386 | 28287 |
| 24 | Ramanagara | 50871 | 51741 | 18308 |
| 25 | Shivamogga | 24428 | 45247 | 21499 |
| 26 | Tumakuru | 43343 | 85342 | 45444 |
| 27 | Udupi | 14285 | 35382 | 12285 |
| 28 | Uttara Kannada | 24797 | 36266 | 15850 |
| 29 | Vijayapura | 36203 | 56884 | 30635 |
| 30 | Yadgir | 17861 | 31411 | 20178 |
| **Total** | | **1228988** | **1708120** | **870911** |